

International Journal of Kannada Research
www.kannadajournal.com

ISSN: 2454-5813
IJKR 2021; 7(2): 93-102
© 2021 IJKR
www.kannadajournal.com
Received: 11-02-2021
Accepted: 15-03-2021

**ಡಾ. ಆರ್. ವಿ. ಪಾಟೀಲ**
ಕನ್ನಡ ವಿಭಾಗ,
ಜೆ. ಎಸ್. ಎಸ್. ಬನಶಂಕರಿ
ಕಲಾ, ವಾಣಿಜ್ಯ ಮತ್ತು ಎಸ್. ಕೆ.
ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ,
ವಿದ್ಯಾಗಿರಿ- ಧಾರವಾಡ-೦೪

Corresponding Author:
**ಡಾ. ಆರ್. ವಿ. ಪಾಟೀಲ**
ಕನ್ನಡ ವಿಭಾಗ,
ಜೆ. ಎಸ್. ಎಸ್. ಬನಶಂಕರಿ
ಕಲಾ, ವಾಣಿಜ್ಯ ಮತ್ತು ಎಸ್. ಕೆ.
ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ,
ವಿದ್ಯಾಗಿರಿ- ಧಾರವಾಡ-೦೪

# ಜನಪದರ ನಂಬಿಕೆಗಳು : ಒಂದು ಅಧ್ಯಯನ

**ಡಾ. ಆರ್. ವಿ. ಪಾಟೀಲ**

## ಪ್ರಸ್ತಾವನೆ:

ರಹಸ್ಯಮಯವಾದ ಸೃಷ್ಟಿಯು ದೈವಲೀಲೆಯಿಂದ ಹುಟ್ಟಿಕೊಂಡಿದೆ ಎಂದು ಜನಸಾಮಾನ್ಯರು ನಂಬಿಕೊಂಡು ಬಂದಿದ್ದಾರೆ ಇಂಥ ವಿಸ್ಮಯಕಾರಿಯಾದ ಜಗತ್ತಿನಲ್ಲಿ ಮನುಷ್ಯನು ಅತಿಮಾನುಷ ಶಕ್ತಿಗಳನ್ನು 'ದೇವರೆಂದು' ಮಾರಕವಾದ ಶಕ್ತಿಗಳನ್ನು 'ಸೈತಾನ-ದೆವ್ವ' ಎಂದು ನಂಬಿ ಅವುಗಳಿಗೆ ಸಾಂಕೇತಿಕ ಹೆಸರುಗಳಿಂದ ಆರಾಧಿಸುವ ಪರಂಪರೆಯನ್ನು ರೂಪಿಸಿಕೊಂಡು ಬಂದನು. ಹೀಗೆ ರೂಢಿಸಿಕೊಂಡು ಬಂದ ಆಚಾರಗಳೆ ಜನಪದರಲ್ಲಿ ನಂಬಿಕೆಗಳಾಗಿ ಬಲಗೊಂಡವು. ದೇಶ ಪ್ರದೇಶವಾರು ಭಿನ್ನ-ಭಿನ್ನ ಆಚಾರ-ವಿಚಾರಗಳು ಹುಟ್ಟಿಕೊಂಡವು. ನಂಬಿಕೆಗಳು ಹೇಗೆ ಹುಟ್ಟಿದವು, ಯಾಕೆ ಹುಟ್ಟಿದವು ಎಂದು ನಿಖರವಾಗಿ ಹೇಳುವುದು ಅಸಾಧ್ಯ. ಏಕೆಂದರೆ ನಂಬಿಕೆಗೂ ಮಾನವನಿಗೂ ಅವಿನಾಭಾವ ಸಂಬಂಧವಿದೆ. ನಂಬಿಕೆ ಇಲ್ಲದವನು ಬದುಕಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಜನಪದರು ನಿತ್ಯ ತಮ್ಮ ವ್ಯವಹಾರಿಕ ಜೀವನದ ಸಂದರ್ಭದಲ್ಲಿ ಮಾತನಾಡಿಕೊಳ್ಳುವುದನ್ನು ಕೇಳಿದರೆ-ನಂಬಿಕೆ ಇರಬೇಕು, ನಂಬು, ನಂಬಿಕೆ ಇಲ್ಲದಿದ್ರ ಆಗುವುದಿಲ್ಲ. ಅವನಿಗೆ ನಂಬಿಕಿಲ್ಲ ಬಿಡ್ರಿ, ನಂಬಿ ಕೆಟ್ಟವರಿಲ್ಲ ಎಂಬ ಗಾದೆಮಾತಿನೊಂದಿಗೆ-'ನಂಬಿ ಕರದೊಡೆ ಓ ಎನ್ನನೆ ಶಿವನು'. ಎಂಬ ವಚನದಂತೆ ನಮ್ಮ ಗ್ರಾಮೀಣ ಊರುಗಳಲ್ಲಿ ಜನರು ನಂಬಿಕೆ ಕುರಿತು ಮಾತನಾಡುತ್ತಾರೆ. ಗ್ರಾಮಗಳಲ್ಲಿ ವಾಸಿಸುವ ಜನರಿಗೆ 'ನಂಬಿಕೆ ಎಂಬುದು ತುಂಬಾ ಮಹತ್ವ ಪಡೆದುಕೊಳ್ಳುತ್ತದೆ ಯಾವುದಾದರೂ ವ್ಯವಹಾರದಲ್ಲಿ ನೋಡಪಾ ನನ್ನ ಮ್ಯಾಗ ನಂಬಿಕೆ ಇದ್ರ ವ್ಯವಹಾರ ಮಾಡು ಇಲ್ಲಂದ್ರ ಬ್ಯಾಡ, ಮನುಷ್ಯಾಗ ನಂಬಿಕೆ ಭಾಳ ಮುಖ್ಯ ಅನ್ನುವುದಾಗಲಿ, ನಾ ನಂಬಿದವರಿಗೆ ಎರಡು ಬಗೆಂಗಿಲ್ಲಪ್ಪಾ ಎನ್ನವುದಾಗಲಿ, ಏ ಅಂವಾ ಬಾಳ ನಂಬಿಕಸ್ಥ ಮನಷ್ಯಾರಿ! ಎಂಬಂತಹ ನಂಬಿಕೆ ಕುರಿತು ದಿನ ನಿತ್ಯ ಜನಪದರ ಬಾಯಲ್ಲಿ ಕೇಳುವುದುಂಟು. ಜನಪದರ ಹಾಡುಗಳಲ್ಲಿ ನಂಬಿ ಕೆಟ್ಟ ಮ್ಯಾಲ ನರ ಮನುಷ್ಯನಾಗಿ ಬಾಳಬಾರ್ದು ಎಂದು ಭಜನೆ ಹಾಡುಗಳಲ್ಲಿ ಹೀಗೆ ಜನಪದರು ನಂಬಿಕೆ ಕುರಿತು ತುಂಬಾ ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದನ್ನು ಇಂದಿಗೂ ಕಾಣಬಹುದು

## ಅಧ್ಯಯನದ ಉದ್ದೇಶ ಮತ್ತು ವಿಧಾನ :

ಜನಪದರು ಅನುಸರಿಸಿಕೊಂಡು, ಆಚರಿಸಿಕೊಂಡು ಬಂದಿರುವ ನಂಬಿಕೆಗಳ ಅರ್ಥ, ಮಹತ್ವ ಹಾಗೂ ವಿಶೇಷತೆ ತಿಳಿಯುವುದು. ಜನಪದರ ನಂಬಿಕೆಗಳನ್ನು ಸಂಗ್ರಹಿಸಿ ವೈಜ್ಞಾನಿಕವಾದ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವುದು.
ಪ್ರಸ್ತುತ ಅಧ್ಯಯನವನ್ನು ಪ್ರಮುಖವಾಗಿ ಪ್ರಾಥಮಿಕ ದತ್ತಾಂಶವನು ಆದರಿಸಿದೆ. ಕ್ಷೇತ್ರಕಾರ್ಯ, ಸಂದರ್ಶನ ಹಾಗೂ ಈ ವಿಷಕ್ಕೆ ಸಂಬಂಧಿಸಿದ ಬರಹಗಳ ಅವಲೋಕನದೊಂದಿಗೆ ಪ್ರಸ್ತುತತ ಅಧಯನವನು ನಡೆಸಲಾಗಿದೆ.

## ಪೂರ್ವ ಅಧ್ಯಯನಗಳ ಅವಲೋಕನ :

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ೨೩ನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನವನ್ನು ಕೆ.ಆರ್.ಬೆಲ್ಲದ ಕಾಲೇಜು ಮುಂಡರಗಿಯಲ್ಲಿ ಫೆಬ್ರವರಿ೧೮-೧೯-೧೯೯೬ರಂದು ಡಾ.ಎಂ.ಜಿ.ಬಿರಾದಾರ ಅವರ ಅಧ್ಯಕ್ಷತೆಯಲ್ಲಿ ನಡೆಸಿದ ಡಾ.ಎಂ.ಬಿ.ನೇಗಿನಾಳ, ಡಾ.ಮ.ಗು.ಬಿರಾದಾರ, ಎ.ವ್ಹಿ.ನಾವಡ, ಡಾ.ವಿಲ್ಯಂ ಮಾಡ್ತಾ, ಪುರುಷೋತ್ತಮ ಬಿಳಿಮಲೆ, ಡಾ.ಹರಿಲಾಲ ಪವಾರ, ಶ್ರೀ.ನಾರಾಯಣಸ್ವಾಮಿ, ಡಾ.ಮಧು ವೆಂಕಾರೆಡ್ಡಿ, ಡಾ.ವೀರಣ್ಣ ದಂಡೆ, ಶ್ರೀ.ಎಸ್.ಬಿ.ಭರಮಗೌಡರ,